8)	ಮಲ್ಪೆ ಕಡಲು ತೀರ ಅಭಿವೃದ್ಧಿ	8.00
9)	ಮಲ್ಪೆ ಕಡಲು ತೀರ ಕೂಡುರಸ್ತೆ	5.00
10)	ಸಿರೂರು ಕಡಲುತೀರ ಕೂಡುರಸ್ತೆ	5.00
11)	ಪಿಲಿಕುಲ ನಿಸರ್ಗಧಾಮಕ್ಕೆ ಟಾಯಟ್ರೈನ್ ಸೌಲಭ್ಯ	5.00
12)	ವೇಣೂರು ಬಾಹುಬಲಿ ಕೂಡುರಸ್ತೆ	2.50
13)	ಮಂಗಳೂರಿನಲ್ಲಿ ಪ್ರವಾಸಿ ಕಛೇರಿ ನಿರ್ಮಾಣ	20.00
14)	ಉಡುಪಿ, ಧರ್ಮಸ್ಥಳ, ಉಳ್ಳಾಲದಲ್ಲಿ ಶೌಚಾಲಯ ನಿರ್ಮಾಣ	17.40
15)	ಉಡುಪಿಯಲ್ಲಿ ಯಾತ್ರಿ ನಿವಾಸ ನಿರ್ಮಾಣ	25.00
16)	ಮರವಂತೆಯಲ್ಲಿ ಯಾತ್ರಿನಿವಾಸ ನಿರ್ಮಾಣ	25.00
17)	ವಾಮಂಜೂರು-ಪಿಲಿಕುಲ ಕೂಡುರಸ್ತೆ	5.00
18)	ಮುಡ್‌ಶೆಡ್-ಪಿಲಿಕುಲ ಕೂಡುರಸ್ತೆ	5.00

(3) ಮಂಗಳೂರಿನ ಹತ್ತಿರವಿರುವ ಪಿಲಿಕುಲ ನಿಸರ್ಗಧಾಮ ಸಮಗ್ರ ಅಭಿವೃದ್ಧಿಗಾಗಿ ಯೋಜನೆ ತಯಾರಿಸಲಾಗುತ್ತಿದ್ದು, ಖಾಸಗಿ ಬಂಡವಾಳ ಹೂಡಿಕೆಗಾಗಿ ಮಂಡಿಸಲಾಗುವುದು.

ಇ) ಹೌದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆಯು ಖಾಸಗಿಯವರು ನಿರ್ಮಿಸಲಿರುವ 41 ಪ್ರವಾಸೋದ್ಯಮ ಯೋಜನೆಗಳಿಗೆ ಅನುಮೋದನೆ ನೀಡಿದೆ ಇದರಿಂದಾಗಿ ಸುಮಾರು 856 ಜನರಿಗೆ ಉದ್ಯೋಗಾವಕಾಶವು ದೊರೆಯುತ್ತದೆಯೆಂದು ಅಂದಾಜು ಮಾಡಲಾಗಿದೆ.

ವಿಷಯ: ಪ್ರವಾಸಿ ಮಾರ್ಗದರ್ಶಿಗಳ ತರಬೇತಿ.

2780 (3967)

ಶ್ರೀ ರಾಜಶೇಖರ ವಿ.ಶೀಲವಂತ (ಗುಳೇದಗುಡ್ಡ): ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇದುವರೆಗೆ ಎಷ್ಟು ಜನಕ್ಕೆ ಪ್ರವಾಸೋದ್ಯಮ ಇಲಾಖೆಯು ಪ್ರವಾಸಿ ಮಾರ್ಗದರ್ಶಿಗಳಿಗೆ ತರಬೇತಿಯನ್ನು ಕೊಟ್ಟಿದೆ.

ಅ) ಎಲಾ ಋತುಗಳಲ್ಲಿ ಎಲ್ಲಾ ಕಡೆಗಳಲ್ಲಿ ಪ್ರವಾಸಿಗರ ಸಂಖ್ಯೆ ಒಂದೇ ಪ್ರಮಾಣದಲ್ಲಿ ಇರುತ್ತದೆಯೇ?

ಇ) ಪ್ರವಾಸಿಗರನ್ನು ಅವಲಂಬಿಸಿ ಜೀವನ ನಡೆಸುತ್ತಿರುವ ಮಾರ್ಗದರ್ಶಿಗಳಿಗೆ ಪ್ರವಾಸಿಗರ ಸಂಖ್ಯೆ ಇಳಿಮುಖವಾದ ಸಂದರ್ಭದಲ್ಲಿ ಇವರ ಉಪ ಜೀವನಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಪ್ರವಾಸಿ ಮಾರ್ಗದರ್ಶಿಗಳ ಜೀವನೋಪಾಯಕ್ಕೆ ತಾವು ತೆಗೆದುಕೊಳ್ಳುವ ಕ್ರಮಗಳು ಯಾವುವು?

ಉ) ಶೀಘ್ರದಲ್ಲಿ ಅವುಗಳನ್ನು ಜಾರಿಗೆ ತರಬಯಸುವಿರಾ?

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್. (ಪ್ರವಾಸೋದ್ಯಮ, ಕನ್ನಡ ಮತ್ತು ರಾಜ್ಯ ಸಚಿವರು):

ಅ) ಕರ್ನಾಟಕ ಪ್ರವಾಸೋದ್ಯಮ ಇಲಾಖಾವತಿಯಿಂದ ಇದುವರೆಗೆ ಒಟ್ಟು 300 ಮಾರ್ಗದರ್ಶಿಗಳಿಗೆ ತರಬೇತಿ ನೀಡಲಾಗಿದೆ.

ಆ) ಇಲ್ಲ. ಪ್ರವಾಸಿಗರ ಸಂಖ್ಯೆ ಪ್ರಮುಖ ಪ್ರವಾಸಿ ಸ್ಥಳ ಹಾಗೂ ಋತುಗಳ ಮೇಲೆ ಅವಲಂಬಿಸಿರುತ್ತದೆ.

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ವಿಷಯ: ಗುಳೇದಗುಡ್ಡ ಪಟ್ಟಣದ ಕಂದಗಲ್ ಹನುಮಂತರಾಯ ಸ್ಮಾರಕ ಭವನದ ನಿರ್ಮಾಣ ಕಾರ್ಯ

2781 (3795)

ಶ್ರೀ ರಾಜಶೇಖರ ವಿ.ಶೀಲವಂತ (ಗುಳೇದಗುಡ್ಡ): ಮಾನ್ಯ ಪ್ರವಾಸೋದ್ಯಮ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಳೇದಗುಡ್ಡ ಪಟ್ಟಣದ ಕಂದಗಲ್ ಹನುಮಂತರಾಯ ಸ್ಮಾರಕ ಭವನ ನಿರ್ಮಾಣ ಕಾರ್ಯವು ಅರ್ಧಕ್ಕೆ ನಿಂತಿದ್ದು ಅದನ್ನು ಪೂರ್ಣಗೊಳಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ?